(99)

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2414\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 21/03/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ 1) ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯ ಶಿಕ್ಷಣ ಸಂಯೋಜಕರು ಶ್ರೀ.ಎಸ್.ರಮಣಪ್ಪ, 2)ಗಟ್ಟಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿಯಾದ ಶ್ರೀಮತಿ.ಎನ್.ಕೆ.ಗಾಯತ್ರಿ ಮತ್ತು 3) ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀ.ಶ್ರೀರಾಮರೆಡ್ಡಿ ರವರು ದುರ್ನಡತೆ ಎಸಗಿರುವ ಬಗ್ಗೆ.

**********

ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕ್ ಕೊಳದೇವಿ ಅಂಚೆ ಮಂಡಿಕಲ್ ಗ್ರಾಮದ ನಿವಾಸಿಯಾದ ಶ್ರೀ.ಮಂಡಿಕಲ್ ನಾಗರಾಜ್ ಬಿನ್ ಎಂ.ಬಿ.ನಾರಾಯಣ ಗೌಡ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ 1) ಕ್ಷೇತ್ರ ಶಿಕ್ಷಣಾಧಿಕಾರಿ, 2) ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯ ಶಿಕ್ಷಣ ಸಂಯೋಜಕರು ಶ್ರೀ.ಎಸ್.ರಮಣಪ್ಪ, 3) ಗಟ್ಟಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿಯಾದ ಶ್ರೀಮತಿ.ಎನ್.ಕೆ.ಗಾಯತ್ರಿ ಮತ್ತು 4) ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀ.ಶ್ರೀರಾಮರೆಡ್ಡಿ [ಇನ್ನು ಮುಂದೆ "1 ರಿಂದ 4ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:- CWSN (Children With Special Needs) ಶೌಚಾಲಯದ ಕಾಮಗಾರಿಯನ್ನು ದಿನಾಂಕ:05/02/15ರಂದು ಗುತ್ತಿಗೆದಾರರಾದ ಶ್ರೀ.ಎ.ಅಂಬರೀಷ್ ರವರಿಗೆ ₹25,000/- ಹಣವನ್ನು ಡ್ರಾ ಮಾಡಲು, ಎಸ್‌ಡಿಎಂಸಿ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿರುವುದಾಗಿ ಸಭಾ ನಡವಳಿಯಲ್ಲಿ ತೋರಿಸಿ, ಸಭೆಗೆ ಮುಂಚೆ ದಿನಾಂಕ:03/02/15ರಂದು ಸೆಲ್ಫ್ ಚೆಕ್ ಸಂಖ್ಯೆ:634398ರಲ್ಲಿ

100



₹30,000/– ಹಣವನ್ನು ಡ್ರಾ ಮಾಡಿ ಅಕ್ರಮ ಎಸಗಿದ್ದು, ಗಟ್ಟಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪ್ರಭಾರ ಮುಖ್ಯ ಶಿಕ್ಷಕಿಯಾದ 3ನೇ ಎದುರುದಾರರು ಸರ್ಕಾರದ ಹಣವನ್ನು ಲೂಟಿ ಮಾಡಿದ್ದಾರೆ;

ಸದರಿ ಕಾಮಗಾರಿಯನ್ನು ನಡೆಸಲು ಕ್ರಿಯಾ ಯೋಜನೆ, ಅಂದಾಜನ್ನು ತಯಾರಿಸದೇ ತಾವೇ ಕೆಲಸ ಮಾಡಿಸಿ, ಗುತ್ತಿಗೆದಾರರಿಂದ ಕೆಲಸ ಮಾಡಿಸಿರುವುದಾಗಿ 1, 2 ಮತ್ತು 4ನೇ ಎದುರುದಾರರ ಸಹಕಾರದೊಂದಿಗೆ 3ನೇ ಎದುರುದಾರರು ಹಣ ದುರುಪಯೋಗ ಪಡಿಸಿಕೊಂಡಿರುವುದಾಗಿ ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ–

ದೂರಿಗೆ ಸಂಬಂಧಿಸಿದಂತೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗಟ್ಟಹಳ್ಳಿ, ಕೋಲಾರ ತಾಲ್ಲೂಕ್ ಇಲ್ಲಿ CWSN ಶೌಚಾಲಯದ ನಿರ್ಮಾಣಕ್ಕೆ 2014–15ನೇ ಸಾಲಿಗೆ ₹1,10,588/–ಗಳು ಮಂಜೂರಾಗಿದ್ದು, ಪ್ರಭಾರಿ ಮುಖ್ಯ ಶಿಕ್ಷಕಿಯಾದ 3ನೇ ಎದುರುದಾರರು, ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರುಗಳು ಸೇರಿ, ಕಾಮಗಾರಿಯ ಗುತ್ತಿಗೆಯನ್ನು ಅದೇ ಗ್ರಾಮದ ಶ್ರೀ.ಎ.ಅಂಬರೀಷ್ ರವರಿಗೆ ನೀಡಿ, ಕಾಮಗಾರಿಯ ಆಯಾಯ ಹಂತದ ಕೆಲಸ ಮುಗಿದ ನಂತರ ಮಂಜೂರಾದ ಹಣವನ್ನು ಗುತ್ತಿಗೆದಾರರಿಗೆ ನೀಡಿ, ರಸೀದಿ ಪಡೆದಿದ್ದು, ಹಣ ಸಂದಾಯ ರಸೀದಿಗಳಿಗೆ ಸಹಿ ಮಾಡಿ, ತಾವು ಅನುಮೋದಿಸಿದ್ದು, ಶೌಚಾಲಯದ ನಿರ್ಮಾಣಕ್ಕೆ ಬಿಡುಗಡೆಯಾದ ಹಣ ದುರುಪಯೋಗ ಆಗಿಲ್ಲ ಎಂದು ಹೇಳಿದ್ದಾರೆ.

4. ಮೂರು (3) ಮತ್ತು 4ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ, 1 ಮತ್ತು 2ನೇ ಎದುರುದಾರರುಗಳ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

5. ದೂರಿನ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು, ಕೋಲಾರ ರವರಿಂದ ವರದಿಯನ್ನು ಕೇಳಲಾಗಿ, ದೂರಿನ ಬಗ್ಗೆ ವಿಚಾರಣೆ ನಡೆಸಿ, ವರದಿ ನೀಡುವಂತೆ ಶಾಲೆಗೆ ತ್ರಿಸದಸ್ಯ ತಂಡವನ್ನು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ಕಳುಹಿಸಿದ್ದು, ಸದರಿಯವರು ತನಿಖೆ ನಡೆಸಿ ತಮ್ಮ ವರದಿಯಲ್ಲಿ –

3ನೇ ಎದುರುದಾರರು ಹಾಗೂ ಹಾಲೀ ಮುಖ್ಯ ಶಿಕ್ಷಕರು ಸೆಲ್ಫ್ ಚೆಕ್ ಮುಖೇನ ಹಣವನ್ನು ಡ್ರಾ ಮಾಡಿರುವುದು ಪ್ರೊಸೀಜರ್ ಲ್ಯಾಪ್ಸ್ ಮಾತ್ರ ಆಗಿದೆ, ಹಣ ದುರುಪಯೋಗ ಆಗಿಲ್ಲ ಎಂದು ಹೇಳಿದ್ದಾರೆ.

BD/2414/17



101

6. ಆಕ್ಷೇಪಣೆಗಳಿಗೆ ಮತ್ತು ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ವಿವರವಾದ ಪ್ರತ್ಯುತ್ತರವನ್ನು ಸಲ್ಲಿಸಿ, ಶೌಚಾಲಯ ನಿರ್ಮಾಣಕ್ಕೆ ಬಿಡುಗಡೆಯಾದ ಹಣ ದುರುಪಯೋಗವಾಗಿದೆ ಎಂಬ ದೂರಿನ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗಟ್ಟಹಳ್ಳಿ, ಕೋಲಾರ ತಾಲ್ಲೂಕ್ ಶಾಲೆಗೆ CWSN ಶೌಚಾಲಯದ ನಿರ್ಮಾಣಕ್ಕೆ 2014–15ನೇ ಸಾಲಿನಲ್ಲಿ ಎರಡು ಕಂತುಗಳಲ್ಲಿ ಒಟ್ಟು ₹1,10,588/–ಗಳು ಮಂಜೂರಾಗಿದ್ದು, ಸದರಿ ಕಾಮಗಾರಿಯನ್ನು ಕೆಟಿಪಿಪಿ ಕಾಯಿದೆ ಅನ್ವಯ ಟೆಂಡರ್ ಕರೆಯದೇ, ಶಾಲಾ ಎಸ್‌ಡಿಎಂ ಸಮಿತಿ (SDMC)ಯ ತೀರ್ಮಾನದನ್ವಯ ಶ್ರೀ.ಎ.ಅಂಬರೀಷ್ ರವರಿಗೆ ವಹಿಸಿದೆಯೆಂದು ಮತ್ತು ಸದರಿ ಗುತ್ತಿಗೆದಾರರಿಗೆ ಕಾಮಗಾರಿಯ ಬಾಬ್ತು ದಿನಾಂಕ:05/02/15ರಂದು ₹25,000/–, ದಿನಾಂಕ:25/02/15ರಂದು ₹50,000/–, ದಿನಾಂಕ:02/05/15ರಂದು ₹20,000/– ಮತ್ತು ದಿನಾಂಕ:06/10/15ರಂದು ₹15,588/–ಗಳನ್ನು ಹೀಗೆ ಒಟ್ಟು ₹1,10,588/–ಗಳು ನೀಡಿದೆಯೆಂದು ಎಸ್‌ಡಿಎಂಸಿ ಸಭಾ ನಡವಳಿಯಲ್ಲಿ ದಾಖಲಾಗಿದೆ. ಸದರಿ ಸಭಾ ನಡವಳಿಗಳಿಗೆ ದೂರಿನ 3ನೇ ಎದುರುದಾರರು ಶಾಲೆಯ ಮುಖ್ಯೋಪಾಧ್ಯಾಯರಾಗಿ, 4ನೇ ಎದುರುದಾರರು ಎಸ್‌ಡಿಎಂ ಸಮಿತಿಯ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರು ಮತ್ತು ಇತರೆ ಸದಸ್ಯರು ಸಹಿ ಮಾಡಿದ್ದಾರೆ. ಸದರಿ ಹಣವನ್ನು ನಗದಾಗಿ ನೀಡಲಾಗಿದೆಯೇ ಅಥವಾ ಚೆಕ್ ಮುಖೇನ ನೀಡಲಾಗಿದೆಯೇ ಎಂಬ ವಿವರ ಸಭಾ ನಡವಳಿಯಲ್ಲಿ ದಾಖಲಾಗಿಲ್ಲ. ಆದರೆ, ಶಾಲೆಯ ಬ್ಯಾಂಕ್ ಖಾತೆ ಸಂಖ್ಯೆ:640824204434ರ ಪಾಸ್ ಪುಸ್ತಕದ ಪ್ರತಿಯನ್ವಯ, ₹30,000/–ಗಳನ್ನು ದಿನಾಂಕ:03/02/15ರಂದು, ₹50,000/–ಗಳನ್ನು ದಿನಾಂಕ:25/02/15ರಂದು, ₹20,000/–ಗಳನ್ನು ದಿನಾಂಕ:02/05/15ರಂದು, ₹10,000/–ಗಳನ್ನು ದಿನಾಂಕ:05/10/15ರಂದು ಮತ್ತು ₹588/–ಗಳನ್ನು ದಿನಾಂಕ:30/12/15ರಂದು ಸೆಲ್ಫ್ ಚೆಕ್‌ಗಳ (ಕ್ರಮವಾಗಿ, ಚೆಕ್ ಸಂಖ್ಯೆ:634398, 634399, 634401, 634402 ಮತ್ತು 634403) ಮುಖೇನ ಪಡೆದಿರುವುದು ಕಂಡು ಬಂದಿದೆ;

2) ಸದರಿ ಹಣವನ್ನು ಮೇಲೆ ಹೇಳಿದ ಗುತ್ತಿಗೆದಾರರೇ ಸ್ವೀಕರಿಸಿದ್ದಾರೆ ಎಂಬ ಬಗ್ಗೆ ಎಸ್‌ಡಿಎಂ ಸಮಿತಿಯ ನಡವಳಿಯನ್ನು ಹೊರತುಪಡಿಸಿ, ಬೇರೆ ದಾಖಲೆಗಳಿಲ್ಲ. ಕಡತದಲ್ಲಿರುವ ದಾಖಲೆ \ ರಸೀದಿಗಳನ್ವಯ ಈ ಕೆಳಗಿನ ಮೊತ್ತವನ್ನು ಬೇರೆ ಬೇರೆ ದಿನಾಂಕಗಳಂದು ಬೇರೆ ಬೇರೆ ವ್ಯಕ್ತಿಗಳಿಗೆ ನೀಡಲಾಗಿದೆಯೆಂದು ಕಂಡು ಬಂದಿದೆ –

| ಕ್ರ. ಸಂ. | ವಸ್ತುಗಳ ವಿವರ | ಮೊತ್ತ ₹ ಗಳಲ್ಲಿ | ದಿನಾಂಕ | ಹಣ ಸ್ವೀಕರಿಸಿದವರು ಶ್ರೀ. |
|---|---|---|---|---|
| 1 | 2 ಲೋಡ್ ಮರಳು | 4000.00 | 05/02/15 | 4ನೇ ಎದುರುದಾರರು |
| 2 | 1 ಲೋಡ್ ಜಲ್ಲಿ | 3500.00 | 05/02/15 | ಮುನಿಯಪ್ಪ |
| 3 | 2 ಲೋಡ್ ಮರಳು | 4000.00 | 05/02/15 | 4ನೇ ಎದುರುದಾರರು |
| 4 | ಇಟ್ಟಿಗೆ | 10000.00 | 06/02/15 | ಮುನೇಗೌಡ |
| 5 | 40 ಬ್ಯಾಗ್ ಸಿಮೆಂಟ್ & ಕಬ್ಬಿಣದ ಬಾಗಿಲು | 24000.00 | 10/03/15 | ಶೇಖರ್.ಎಸ್, ಮಾಲೀಕರು, ಶ್ರೀನಿವಾಸ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್. |
| 6 | 125 ಕೆಜಿ ಸ್ಟೀಲ್ | 5000.00 | 13/03/15 | |
| 7 | ಟ್ಯಾಂಕ್ & ಪ್ಲಂಬಿಂಗ್ ಸಾಮಗ್ರಿಗಳು | 7010.00 | 15/04/15 | |
| 8 | ಸಿಮೆಂಟ್ ಕಿಟಕಿ & ಇತರೆ ಸಾಮಗ್ರಿಗಳು | 15200.00 | 30/04/15 | |
| 9 | ಪಾಯ ಕೂಲಿ | 3500.00 | 06/05/15 | ಗಂಗಪ್ಪ, ಮೇಸ್ತ್ರಿ |
| 10 | ಪಾಯ ಮತ್ತು ಕಟ್ಟಡ ಕಟ್ಟಲು ಕೂಲಿ | 16000.00 | 15/05/15 | ಯು.ನಾಗೇಶ್, ಮೇಸ್ತ್ರಿ |
| 11 | ಮೌಲ್ಡಿಂಗ್ & ಪ್ಲಾಸ್ಟರಿಂಗ್ ಕೂಲಿ | 9500.00 | 06/10/15 | |
| 12 | ಟೈಲ್ಸ್ & ಫಿಟ್ಟಿಂಗ್ | 6000.00 | 08/10/15 | ಶೇಖರ್.ಎಸ್, ಮಾಲೀಕರು, ಶ್ರೀನಿವಾಸ ಹಾರ್ಡ್‌ವೇರ್ & ಎಲೆಕ್ಟ್ರಿಕಲ್ಸ್ |
| 13 | ಪೇಂಟಿಂಗ್ & ನಾಮ ಫಲಕ | 2900.00 | 15/10/15 | ಕೆ.ಟಿ.ಶ್ರೀನಿವಾಸ, ನಂದಿನಿ ಆರ್ಟ್ಸ್, ಶ್ರೀನಿವಾಸಪುರ |
| | **ಒಟ್ಟು ಮೊತ್ತ** | 110610.00 | | |

ಮೇಲೆ ಹೇಳಿದ ದಾಖಲೆ \ ರಸೀದಿಗಳಿಗೆ ದೂರಿನ 2 ರಿಂದ 4ನೇ ಎದುರುದಾರರುಗಳು ಸಹಿ ಮಾಡಿದ್ದಾರೆ;

3) ಕೆಎಫ್‌ಸಿ ಪರಿಚ್ಛೇದ 57ರನ್ವಯ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು. ಅದೇ ರೀತಿ, ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55 (49)(ಎ)ರನ್ವಯ ₹5,000/– ಮೀರಿದ ₹1,00,000/–ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಆದರೆ, ಮೇಲಿನ ಖಂಡಿಕೆ–2ರ ಖರೀದಿಗಳಿಗೆ ಸಂಬಂಧಿಸಿದಂತೆ, ಕೊಟೇಷನ್‌ಗಳನ್ನು ಕರೆದ ಹಾಗೂ ಸರಬರಾಜುದಾರರಿಗೆ ಚೆಕ್ ಮೂಲಕ ಹಣ

ಪಾವತಿಸಿದ ಬಗ್ಗೆ ದಾಖಲೆಗಳಿಲ್ಲ. ಕಾರಣ, ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ ಕೆಎಫ್‌ಸಿ ನಿಯಮ 57ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

4) ಶೌಚಾಲಯದ ನಿರ್ಮಾಣಕ್ಕೆ ಬಿಡುಗಡೆಯಾದ ₹1,10,588/-ಗಳನ್ನು ಅದೇ ಉದ್ದೇಶಕ್ಕೆ ಉಪಯೋಗಿಸಲಾಗಿದೆ ಹಾಗೂ ಸದರಿ ಹಣವನ್ನು ಸರ್ಕಾರದ ನಿಯಮಗಳನ್ವಯ ಖರ್ಚು ಮಾಡಲಾಗಿದೆಯೆಂದು 2 ರಿಂದ 4ನೇ ಎದುರುದಾರರುಗಳು ಉಪಯೋಗತಾ ಪ್ರಮಾಣ ಪತ್ರವನ್ನು ಉಪ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಕೋಲಾರ ರವರಿಗೆ ಸಲ್ಲಿಸಿದ್ದಾರೆ;

5) ಸದರಿ ದೂರಿನ ಕಾಮಗಾರಿಯ ಅಂದಾಜು ಒಂದು ಲಕ್ಷ ಮೀರಿರುವುದರಿಂದ, ಕೆಟಿಪಿಪಿ ಕಾಯಿದೆಯ ಕಲಂ 4ರನ್ವಯ ಟೆಂಡರ್ ಕರೆದು ನಿಯಮಗಳನ್ವಯ ಕಾಮಗಾರಿಯನ್ನು ನಿರ್ವಹಿಸ ಬೇಕಿತ್ತು. ಆದರೆ, ಟೆಂಡರ್ ಕರೆಯದೇ ಎಸ್‌ಡಿಎಂಸಿ ನಡವಳಿಯ ಆಧಾರದ ಮೇಲೆ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ.ಎ.ಅಂಬರೀಷ್ ರವರಿಗೆ ವಹಿಸಿ, 3 ಮತ್ತು 4ನೇ ಎದುರುದಾರರು ಕರ್ತವ್ಯ ಲೋಪ ಎಸಗಿದ್ದಾರೆ.

6) ಸದರಿ ಕಾಮಗಾರಿಗೆ ಸರ್ವ ಶಿಕ್ಷಣ ಅಭಿಯಾನ ದಿಂದ ಹಣ ಮಂಜೂರಾಗಿದ್ದು, ಕಾಮಗಾರಿಯನ್ನು ಕೆಟಿಪಿಪಿ ನಿಯಮಾವಳಿ ಅನ್ವಯ ನಿರ್ವಹಿಸದೇ, ತಮ್ಮ ಆಯ್ಕೆಯ ಗುತ್ತಿಗೆದಾರರಿಂದ ಕಾಮಗಾರಿಯನ್ನು ನಿರ್ವಹಿಸಿದೆ ಎಂದು ಹೇಳಿ ಒಟ್ಟು ₹1,10,588/-ಗಳನ್ನು ಸೆಲ್ಫ್ ಚೆಕ್‌ಗಳ ಮುಖೇನ ಹಣವನ್ನು ಎಸ್‌ಡಿಎಂ ಸಮಿತಿಯ ತೀರ್ಮಾನದನ್ವಯ ಪ್ರಭಾರಿ ಮುಖ್ಯ ಶಿಕ್ಷಕಿಯಾದ 3ನೇ ಎದುರುದಾರರು ಬ್ಯಾಂಕ್‌ನಿಂದ ಪಡೆದು ದುರ್ನಡತೆ ತೋರಿದ್ದಾರೆ;

7) ಮೇಲಿನ ಖಂಡಿಕೆ-2ರಲ್ಲಿ ಹೇಳಿದ ದಾಖಲೆ \ ರಸೀದಿಗಳನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗಟ್ಟಹಳ್ಳಿ ರವರ ಹೆಸರಿಗೆ ನೀಡದಿದ್ದರೂ, ಅದರ ಬಾಬ್ತು ಒಟ್ಟು ₹1,10,610/-ಗಳನ್ನು ನಗದಾಗಿ ನೀಡಿದೆ. ಸದರಿ ದಾಖಲೆ \ ರಸೀದಿಗಳಿಗೆ 2ನೇ ಎದುರುದಾರರು ಸಹಿ ಮಾಡಿ ಅನುಮೋದಿಸಿದ್ದಾರೆ;

8) ಕಾಮಗಾರಿಯನ್ನು ಕಾರ್ಯಪಾಲಕ ಅಭಿಯಂತರರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ರವರು ತಯಾರಿಸಿದ ಅಂದಾಜು ಪಟ್ಟಿಯಂತೆಯೇ ನಿರ್ವಹಿಸಲಾಗಿದೆ ಎಂಬ ಬಗ್ಗೆ ಯಾವುದೇ ದಾಖಲೆಗಳಿಲ್ಲ;

9) ಕಾಮಗಾರಿಯ ಬಾಬ್ತು ₹1,10,588/-ಗಳನ್ನು 4 ಕಂತುಗಳಲ್ಲಿ ಗುತ್ತಿಗೆದಾರರಿಗೇ ನೀಡಲಾಗಿದೆಯೆಂದು ಎಸ್‌ಡಿಎಂ ಸಮಿತಿಯ ನಡವಳಿಯಲ್ಲಿ ದಾಖಲಾಗಿದ್ದು, ಸದರಿ ನಮೂದುಗಳು ಹಿಂದಿನ ಖಂಡಿಕೆ-2ರಲ್ಲಿ ಹೇಳಿದ ದಾಖಲೆ \ ರಸೀದಿಗಳಿಗೆ ಪೂರಕವಾಗಿಲ್ಲ;

10) ಕಾಮಗಾರಿಯ ಬಾಬ್ತು ಒಟ್ಟು ₹8,000/-ಗಳನ್ನು 4ನೇ ಎದುರುದಾರರೇ ಸ್ವತಃ ಪಡೆದುಕೊಂಡು ಎಸ್‌ಡಿಎಂ ಸಮಿತಿಯ ಅಧ್ಯಕ್ಷರಾಗಿದ್ದ 4ನೇ ಎದುರುದಾರರು ದುರ್ನಡತೆ ತೋರಿದ್ದಾರೆ;

11) ಕಾರಣ, ಕಾಮಗಾರಿಗೆ ಬಿಡುಗಡೆಯಾದ ಹಣ ಒಟ್ಟು ₹1,10,588/-ಗಳನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆಯೆಂದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಸದರಿ ದುರುಪಯೋಗಕ್ಕೆ 2 ರಿಂದ 4ನೇ ಎದುರುದಾರರು ಜವಾಬ್ದಾರರಾಗಿದ್ದಾರೆ.

104



8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಎದುರುದಾರರು ನೀಡಿರುವ ಆಕ್ಷೇಪಣೆ ಮತ್ತು ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 2 ರಿಂದ 4ನೇ ಎದುರುದಾರರುಗಳು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಸದರಿ ದುರುಪಯೋಗದಲ್ಲಿ 1ನೇ ಎದುರುದಾರರ ಯಾವುದೇ ಪಾತ್ರ ಕಂಡು ಬರುವುದಿಲ್ಲವಾದ್ದರಿಂದ, 1ನೇ ಎದುರುದಾರರ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆ.

10. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2 ರಿಂದ 4ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ನಾಲ್ಕನೇ (4ನೇ) ಎಸ್‌ಡಿಎಂಸಿ ಅಧ್ಯಕ್ಷರಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಶಿಕ್ಷಣ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

12. ಅದಲ್ಲದೆ 2 ಮತ್ತು 3ನೇ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 2 ಮತ್ತು 3ನೇ ಎದುರದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

13. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**